ಶ್ರೀ ಬಿ. ಶಿವಣ್ಣ —ಮಾನ್ಯ ಅಧ್ಯಕ್ಷರೆ, ಈ ಅಂಗನವಾಡಿ ಪ್ರಾಜೆಕ್ಟ್ ಕೇಂದ್ರ ಸರ್ಕಾರ ಮಂತ್ತು ರಾಜ್ಯ ಸರ್ಕಾರ ಕೂಡಿ ಮಾಡತಕ್ಕದ್ದಾಗಿದೆ. ೧೭೫ ತಾಲ್ಲೂಕುಗಳ ಪೈಕಿ ೧೨೫ ತಾಲ್ಲೂಕುಗಳಿಗೆ ಈ ಕಾರ್ಯಕ್ರಮವನ್ನು ಅನ್ವಯ ಮಾಡಿದ್ದೇವೆ. ಇನ್ನುಳಿದ ತಾಲ್ಲೂಕುಗಳಿಗೆ ಮುಂದಿನ ವರ್ಷ ಕೊಡುತ್ತೇವೆ.

ಶ್ರೀಮತಿ ದಮಯಂತಿ ಬೋರೆ ಗೌಡ. —ಈಗ ತಾವು ಹೇಳಿರುವ ಈ ೨೫ ತಾಲ್ಲೂಕುಗಳ ಪ್ರಾಜೆಕ್ಟ್‌ಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಬಿ. ಶಿವಣ್ಣ.—ಈ ವರ್ಷಾಂತ್ಯದೊಳಗೆ ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಚಂದ್ರಪ್ರಭಾ ಅರಸ್.—ಹೊಸದಾಗಿ ಆಗಬೇಕಾದ ಕೇಂದ್ರಗಳ ಬಗ್ಗೆಯೂ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಈ ಕಾರ್ಯಕ್ರಮಗಳನ್ನು ಎಲ್ಲ ಕಡೆಯೂ ಜಾರಿಗೊಳಿಸಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಶಿವಣ್ಣ.—ಆಗಬಹುದು. ಅಲ್ಲಿಂದ ಮಂಜೂರಾತಿ ಬಂದ ಕೂಡಲೇ ನಾವು ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಕ್ರೀಡಾಪಟುಗಳಿಗೆ ಆರ್ಥಿಕ ನೆರವು ನೀಡುವ ಬಗ್ಗೆ

೪೪೭. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,—

ಅ) ರಾಜ್ಯದಿಂದ ವಿದೇಶಗಳಿಗೆ ತೆರಳುವ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ನೀಡಿ ಅವರ ವೆಚ್ಚ ಭರಿಸುವ ಯೋಜನೆ ಸರ್ಕಾರದಲ್ಲಿಯೇ ?

ಆ) ಹಾಗಿದ್ದಲ್ಲಿ ೮೯-೯೦ನೇ ಸಾಲಿನಲ್ಲಿ ಎಷ್ಟು ಜನ ಕ್ರೀಡಾಪಟುಗಳಿಗೆ ಈ ನೆರವು ನೀಡಲಾಗಿದೆ

ಇ) ಥ್ರೋಬಾಲ್ ಫೆಡರೇಷನ್‌ರವರು ಆಯ್ಕೆ ಮಾಡಿ ಸಿಂಗಪುರ, ಥೈಲ್ಯಾಂಡ್‌ಗಳಿಗೆ ಕಳುಹಿಸುತ್ತಿರುವ ಕ್ರೀಡಾಪಟುಗಳಿಗೆ ಹಣ ಕೊಡಲಾಗಿದೆಯೇ ? ಅದರ ವಿವರಗಳನ್ನು ತಿಳಿಸುವುದು ;

ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಹೌದು

ಆ) ಎರಡು

ಇ) ಇಲ್ಲ.

ಶ್ರೀ ಎಲ್. ಆರ್. ಶಿವರಾಮೆಗೌಡ.—ಮಾನ್ಯ ಅಧ್ಯಕ್ಷರೇ ರಾಜ್ಯದಿಂದ ವಿದೇಶಗಳಿಗೆ ತೆರಳುವ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ನೀಡಿ ಅವರ ವೆಚ್ಚವನ್ನು ಭರಿಸುವ ಯೋಜನೆ ಸರ್ಕಾರದಲ್ಲಿದೆಯೇ ಎಂದು ಕೇಳಿರುವುದಕ್ಕೆ ''ಇದೆ ಎಂದು ಹೇಳಿದ್ದಾರೆ'' ಈ ಸಂದರ್ಭದಲ್ಲಿ ಥ್ರೋಬಾಲ್ ಫೆಡರೇಷನ್‌ನವರು ಆಯ್ಕೆ ಮಾಡಿ ಥೈಲ್ಯಾಂಡ್ ಮತ್ತು ಸಿಂಗಪುರಕ್ಕೆ ಕಳುಹಿಸುತ್ತಿರುವ ಕ್ರೀಡಾಪಟುಗಳಿಗೆ ಹಣ ಕೊಡಲಾಗಿದೆಯೇ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದಾರೆ. ಯಾವ ಕಾರಣಕ್ಕಾಗಿ ಹಣ ಕೊಡಲಿಕ್ಕೆ ಸಾಧ್ಯವಾಗಿಲ್ಲವೆನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಸ್. ರಮೇಶ್.—ವೆಚ್ಚವನ್ನು ಭರಿಸಲಿಕ್ಕೆ ಆಹ್ವಾನಿತ ಟೀಮುಗಳಿಗೆ ಸರ್ಕಾರದಿಂದ ಸಹಾಯ ಮಾಡಲಿಕ್ಕೆ ಆಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಥ್ರೋಬಾಲ್ ಫೆಡರೇಷನ್ ಎಂದು ಬೆಂಗಳೂರಿನಲ್ಲಿ ಒಂದು ಸಂಸ್ಥೆ ಇದೆ. ಈ ಸಂಸ್ಥೆಯವರು ಗ್ರಾಮಾಂತರ ಪ್ರದೇಶಗಳಿಂತ ಹೆಚ್ಚಿಗೆ ನಗರ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಮಾಡಿದಂಥ ಮಕ್ಕಳಿಗೆ ಎಲ್ಲಾ ರೀತಿಯ ಉತ್ತೇಜನವನ್ನು ಕೊಡುತ್ತಿದ್ದಾರೆ. ಆದರೆ ನಾವೂ ಚೆನ್ನಾಗಿ ಆಡುತ್ತೇವೆ, ನಮ್ಮನ್ನು ಹೊರದೇಶಗಳಿಗೆ ಕಳುಹಿಸಿಕೊಡಿ ಎಂದು ಕೇಳುವ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂಥ ಕ್ರೀಡಾಪಟುಗಳನ್ನು ಇವರು ಕಳುಹಿಸುತ್ತಿಲ್ಲ. ಇಂತಹ ಕ್ರೀಡಾಪಟುಗಳನ್ನು ಸಹ ಹೊರದೇಶಗಳಿಗೆ ಕಳುಹಿಸಿಕೊಡುವ ಯೋಜನೆಯನ್ನು ಸರ್ಕಾರದವರು

ಹಾಕಿಕೊಂಡಿದ್ದಾರೆಯೇ ಹೇಗೆ? ಈ ವಿಷಯದ ಬಗ್ಗೆ ತಮ್ಮ ಇಲಾಖೆಗೆ ಅವರು ಮನವಿಗಳನ್ನೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಈ ಬಾರಿ ಸೆರೆಕ್ಕಾಗಿರತಕ್ಕಂಥ ೬-೭ ಜನ ಹೆಣ್ಣು ಮಕ್ಕಳು ಗ್ರಾಮಾಂತರ ಪ್ರದೇಶದಿಂದ ಬಂದಿರುವವರಾಗಿದ್ದಾರೆ. ಆದರಲ್ಲೂ ನಮ್ಮ ಭಾಗದಿಂದ ಬಂದಿರತಕ್ಕಂಥ ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ಸಹಾಯಧನ ಕೊಡದಿದ್ದರೆ ಅವರು ಹೋಗಿಬರುವ ಖರ್ಚನ್ನು ಭರಿಸಲಿಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಅಂಶವನ್ನು ಅವರು ತಮ್ಮ ಮನವಿಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಆದ್ದರಿಂದ ಸರ್ಕಾರದವರು ಅವರಿಗೆ ಧನ ಸಹಾಯ ಮಾಡಬೇಕು. ತಾವು ಯುವಜನ ಮಂತ್ರಿಗಳಾಗಿದ್ದೀರಿ. ಆದ್ದರಿಂದ ಇವರಿಗೂ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ,

ಶ್ರೀ ಎಸ್. ರಮೇಶ್.—ಇದರ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಮನವಿಗಳು ಬಂದಿವೆ. ನಾವು ಕೆಲವು ಮಾಹಿತಿಗಳನ್ನು ಆ ಸಂಸ್ಥೆಗೆ ಕೇಳಿದ್ದೇವೆ. ಅಲ್ಲಿಂದ ಮಾಹಿತಿಗಳು ಬಂದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ. ಬಸವರಾಜ್.—ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಿಂದ ಕ್ರೀಡಾಪಟುಗಳು ಹೊರ ದೇಶಗಳಿಗೆ ಹೋಗುತ್ತಿರುತ್ತಾರೆ. ಈ ರೀತಿ ಕರ್ನಾಟಕದಿಂದ ಹೋಗುವ ಟೀಮ್‌ಗಳು ಇಲ್ಲವೇ ಕ್ರೀಡಾಪಟುಗಳು ಕರ್ನಾಟಕ ರಾಜ್ಯಕ್ಕೆ ಹೆಸರು ತರುವ ಕ್ರೀಡಾಪಟುಗಳಾಗಿರುತ್ತಾರೆ. ಆದ್ದರಿಂದ ಅವರಿಗೆ ಹೋಗಿಬರುವ ವೆಚ್ಚವನ್ನು ಸರ್ಕಾರ ಕೊಡುತ್ತದೆಯೇ? ಕೊಡದಿದ್ದರೆ ಇನ್ನು ಮುಂದಾದರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ಕೇಂದ್ರ ರಕ್ಷಣೆ ಸ್ ಮಾಡಿರತಕ್ಕಂಥ ಟೀಮ್‌ಗಳು ಏನಿವೆ ಅವುಗಳಿಗೆ ರಾಜ್ಯ ಸರ್ಕಾರದಿಂದಾಗಲಿ ಅಥವಾ ನಮ್ಮ ಕ್ರೀಡಾ ಸಂಸ್ಥೆಗಳಿಂದಾಗಲಿ ಅವು ಕೇಳಿದಾಗ ಧನ ಸಹಾಯ ಮಾಡತ್ತೇವೆ. ಆದರೆ ಇನ್‌ವಿಟೇಷನ್ ಟೀಮ್‌ಗಳಿಗೆ ಧನ ಸಹಾಯ ಮಾಡಲಿಕ್ಕೆ ಬರುವುದಿಲ್ಲ.

ಚೆಂಕ್ಕೆ ಪ್ರಶ್ನೆ ೯೩ (ಉತ್ತರಿಸಲಾಗಿದೆ)

ಅಧ್ಯಕ್ಷರು.—ಈ ಪ್ರಶ್ನೆ ಮೈನರ್ ಇರಿಗೇಷನ್‌ಗೆ ಸಂಬಂಧಪಟ್ಟಿರುವುದರಿಂದ ಇದನ್ನು ಆ ಇಲಾಖೆಗೆ ಟ್ರಾನ್ಸ್‌ಫರ್ ಮಾಡಿರುತ್ತೇನೆ.

ನೆಲಮಂಗಲ ಕೋರ್ಟ್ ಕಟ್ಟಡದ ಬಗ್ಗೆ

೩೧೬. ಶ್ರೀ ಅಂಜನಮೂರ್ತಿ (ನೆಲಮಂಗಲ).—ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನಿನಲ್ಲಿ ಮುನ್ಸೀಫ್ ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಒಂದು ಸಣ್ಣ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಪ್ರತ್ಯೇಕ ನ್ಯಾಯಾಲಯದ ಕಟ್ಟಡ ಬೇಕೆಂಬ ಮನವಿ ಸರ್ಕಾರಕ್ಕೆ ಬಂದಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಹೌದು.

ಇ) ಕರ್ನಾಟಕ ಉಚ್ಚ ನ್ಯಾಯಾಲಯದ ಸಮಾಲೋಚನೆಯೊಂದಿಗೆ ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ಬಿ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ನೆಲಮಂಗಲದಲ್ಲಿ ಮುನ್ಸೀಫ್ ಮತ್ತು ಮ್ಯಾಜೀಸ್ಟ್ರೇಟ್ ನ್ಯಾಯಾಲಯಕ್ಕೆ ಪ್ರತ್ಯೇಕ ಕಟ್ಟಡ ಕಟ್ಟಬೇಕೆಂಬ ಬಗ್ಗೆ ಕೇಳಿದ್ದಾರೆ. ಈ ಬಗ್ಗೆ ಲ್ಯಾಂಡ್ ಆಕ್ವೈಲ್ ಮಾಡಿದ್ದೇವೆ. ಈ ಕಟ್ಟಡದ ಕಾಸ್ಟ್ ೩ ಲ ೬೦ ಸಾವಿರ ರೂಪಾಯಿಗಳಾಗುತ್ತದೆ. ಈ ದುಡ್ಡು